ಹೊಟ್ಟಿಗಿಳಿಯೂ ಸುಖ ಅನುಭವಿಸಿ, ಆಮೇಲೆ ಡ್ರೆಸ್ ಚೇಂಜ್ ಮಾಡಿ, ಟೀವಿ ಮುಂದ ಒಂದಷ್ಟು ಹೊತ್ತು ಕುಂತು, ಬಿಸಿಬಿಸೀದು ಉಂಡು ಮಲಗಿದ್ರ... ಆಹಹಾ... ಎಂಥ ಜೀವನಾ ಅದು...

ಅರೆರೆ... ತಡೀರಿ ಹೆಣ್ಮಕ್ಕಳೆಲ್ಲ ಆಗಲೇ ಕನಸು ಕಾಣಾಕ ಶುರು ಮಾಡಿರ್ಬೇಕು. ಗಣ್ಮಕ್ಕಳಿಗೆಲ್ಲ ಇದೇನು ಹೊಸಾದು ಅನಸಬಹುದು... ಆದ್ರ ನಮ್ಮ ಕಾಲಿಗೆ ಕಟ್ಟಿರುವ ಗಂಟಿ ಮುಳ್ಳು ಸರಳ ಚುಚ್ತಾವು. ಕಾಲೀಗೆ ಬುಗುರಿ ಬಿಟ್ಟೋರಹಂಗ ಮನೀಗೆ ಹೋದಕೂಡಲೇ ಹೊಸ್ತಲಾ ದಾಟೂದ್ರಿಂದನೇ ಸುರು ಆಗಿರ್ತದ ನಮ್ಮ ಕೆಲಸಾ. ಒಂದು ಕೈ ಯಿಂದ ಸೀರಿ ಪಿನ್ ಬಿಚ್ಕೊಂತನೇ ಸೆರಗು ಸೊಂಟಕ್ಕ ಕಟ್ತಿರ್ತೀವಿ.

ಕಚೇರಿಯೊಳಗ ಎಷ್ಟೇ ದೊಡ್ಡ ಕೆಲಸ ಇದ್ರೂ, ಇಲ್ಲಿ ಮನೀಗೆ ಬಂದ ಕೂಡ್ಲೆ ಮನ್ಯಾಗ ಎಲ್ಲಾರೂ ಊಟಾ ಮಾಡ್ಯಾರೋ ಇಲ್ಲೋ ಕೇಳೂದು ಮೊದಲ ಆದ್ಯತೆ. ಮಕ್ಳಿದ್ದರಂತೂ ಅವರು ಉಂಡಾರೋ ಇಲ್ಲೋ ನೋಡಬೇಕು... ಇಂದಿರಾನೂಯಿ ಪೆಪ್ಸಿಕೊ ಕಂಪೆನಿಯ ಸಿಇಓ ಆಗಿ ಮನೀಗೆ ಬಂದಿದ್ರು. ಅವರಮ್ಮ ಟೀವಿ ನ್ಯೂಸ್ ನೋಡ್ಕೊಂತ ಕುಂತಿದ್ರು. ಇಂದಿರಾ ತನ್ನೆಲ್ಲ ಸಂತೋಷ, ಹೆಮ್ಮೆಯ ಭಾವ ಧ್ವನಿಯೊಳಗ ತುಂಬ್ಕೊಂಡು ಅಗ್ದಿ ಖುಷಿಲೆ ತನ್ನ ಹುದ್ದೆಯ ಬಗ್ಗೆ ಹೇಳಾಕ ಹೋದಾಗ, ಅವರಮ್ಮ ಅಷ್ಟೇ ನಿರ್ಲಿಪ್ತರಾಗಿ 'ಮನ್ಯಾಗ ಹಾಲು ಮುಗದಾವ... ಮೊದ್ಲ ತೊಗೊಂಬಾ' ಅಂದ್ರಂತ.

ಹುದ್ದೆಗಳೇನೇ ಇರಲಿ, ಮಹಿಳೆಯರ ಆಯ್ಕೆಗಳು, ಆದ್ಯತೆಗಳು ಮನಿ, ಅಡಗಿ ಮನೀನೆ ಆಗಿರಬೇಕು ಅನ್ನೂ ಅನಿವಾರ್ಯ ಇಂದಿರಾ ನಾಯಿಗೂ ತಪ್ಪಿಲ್ಲ.

ಅವ್ವಾ... ಒಂದ ಉಸುರಿನಾಗ ಮುಂಜೇನಿಯಿಂದ ಸಂಜೀತನಾ ಏನೇನು ಮಾಡ್ತೀವಿ ಅಂತ ಹೇಳೂದ್ರೊಳಗೇ ಹೈರಾಣ ಆಕ್ತೀವಿ. ಇನ್ನ ಖರೇನೆ ಮಾಡೂದು... ನೀವೆಲ್ಲ ವಿಚಾರ ಮಾಡ್ರಿ... ಒಮ್ಮೆರೆ, ಖಾಲಿ ಇದ್ದಾಗ... ಯಾಕಂದ್ರ ನಾವಂತೂ ಖಾಲಿ ಇರೂದಿಲ್ಲ ನೋಡ್ರಿ... ಹಿಂಗನ್ನೂತ್ಲೆ ಎಲ್ಲಿಂದ್ಲೋ ಒಂದು ಧ್ವನಿ ಕೇಳ್ತದ.. ವಾರದ ರಜಾ ಏನು ಮಾಡ್ತೀರಿ?

ಖರೇನೆ ಏನು ಮಾಡ್ತೀವಿ ವಾರದ ರಜಾ...? ಸಿಗೂದ ವಾರಕ್ಕ ಒಮ್ಮೆ ಸಿಗ್ತದ. ಬಟ್ಟೆ ಕಿತ್ತೂದು, ಮಡಚಿಡೂದು. ಮಕ್ಳಿಗೆ ಬಿಗಿಯಾದ ಬಟ್ಟೆ ಎತ್ತಿಡೂದು... ಅಲ್ಲಿ ಇಲ್ಲಿ ಹೊರಳಾಡೂಮುಂದ ಹೊಲಗಿ ಬಾಯ್ಬಿಟ್ಟಿರ್ತಾವ. ಅವು ಇನ್ನೊಮ್ಮೆ ಸಿಗ್ಲಾರ್ದಂಗ ಎತ್ತಿಡೂದು. ನಮ್ದೂ ಸೀರಿ, ಅರವಿ ಮಡಚಿಡೂದು... ಇದೇ ಮಧ್ಯಾಹ್ನದ ತನಾ ಆಗ್ತದ. ಇನ್ನ ಸಂಜೀಕ ಬಂದ್ರ ಮೆಲ್ಲೂದಕ್ಕ ಒಂದಷ್ಟು ಚುರುಮುರಿ ಚೂಡಾ, ಅವಲಕ್ಕಿ ಚೂಡಾ ಹಚ್ಚಿಡೂದು. ಪಲ್ಯ ಮಾಡಾಕ ಟೈಮ್ ಇರಲಾರ್ದಾಗ ಚಪಾತಿ ಸುರಳೀಗೆ ಬೇಕಾಗುವ ಚಟ್ನಿ ಪುಡಿ ಒಂದ, ಎರಡ... ಯವಾಗರೆ ಮರದಿನಾ ಆಗ್ತದ, ಆಫೀಸಿಗೆ ಹೋಗಿ ನಿರಾಳ ಕೆಲಸಾ ಮಾಡ್ತೇವಿ ಅನ್ನೂಹಂಗ ಆಗಿರ್ತದ. ಆ ವಾರದ ರಜಾ ಅಂತೂ ಸೆಕೆಂಡಿನ ಮುಳ್ಳಿನ್ಹಂಗ ದುಡುದುಡು ಓಡಿ ಮುಗದೇ ಹೋಗ್ತದ. ಅವತ್ತ ಓಡಿ ಓಡಿ ಸುಸ್ತಾದ್ಹಂಗ ಇಡೀ ವಾರ ಮತ್ತ ಕಾಲೆಳೀತದ.

ಹಂಗಾದ್ರ ಇಡೀ ಜೀವನಾನೇ ಹೆಣ್ಮಕ್ಕಳು ಈ ಕಾಲ ಕೂಡಿ ಹಾಕಿದ್ಹಂಗ ಹೆಜ್ಜಿ ಹಾಕ್ತಾರೇನು..? ಈ ಪ್ರಶ್ನೆ ಈಗಷ್ಟೇ ನಿಮ್ಮ ಮನಸಿನಾಗ ಹಾದು ಹೋಗೇದ. ಯಾಕಂದ್ರ ನಿಮಗ ಹೆಣ್ಮಕ್ಕಳಂದ್ರ ಸೀರಿ ತೊಗೊಳ್ಳೋರು. ಗಂಡಗ ಕಾಡೋರು. ಮಕ್ಕಳ ಮ್ಯಾಲೆ ಸಿಟ್ಟು ಮಾಡ್ಕೊಳ್ಳೋರು, ಅತ್ತಿ ಮಾವ ಅಂದ್ರ ಅವಗಣನೆ ಮಾಡೋರು, ಸಿನಿಮಾ ನೋಡೋರು... ಫೋನಿನಾಗ ತಾಸಗಟ್ಲೆ ಹರಟಿ ಹೊಡಿಯೋರು... ಇಂಥವೆಲ್ಲ ಚಿತ್ರಾ ಹಾದು ಹೋಗಿರ್ತಾವ. ನಿಮ್ದೂ ಏನ್ ತಪ್ಪಿಲ್ಲ